ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 236(261)
ಸದಸ್ಯರ ಹೆಸರು : ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 04/03/2020.
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ.

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನೈಸ್ ಸಂಸ್ಥೆಗೆ ಹೂಡಿದ್ದ ನಿಂದನಾ ಅರ್ಜಿ ಸಂಖ್ಯೆ:96/2007 ವಜಾಗೊಂಡಿದ್ದರೂ, ಸದನ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು; (ವಿವರ ನೀಡುವುದು)	ದಿನಾಂಕ:17/02/2020 ರಂದು ಜರುಗಿದ ಸಚಿವ ಸಂಪುಟದ ಸಭೆಯ ನಿರ್ಣಯದಂತೆ ನನ್ನ ಅಧ್ಯಕ್ಷತೆಯಲ್ಲಿ ದಿನಾಂಕ:18/02/2020 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ. ಸದನ ಸಮಿತಿಯ ವರದಿ ಸಹಿತ ಇತರೆ ವಿವರಗಳನ್ನು ಸಚಿವ ಸಂಪುಟ ಉಪ ಸಮಿತಿಯ ಮುಂದೆ ಮಂಡಿಸಲಾಗುವುದು ಹಾಗೂ ಸಮಿತಿ ಸೂಚನೆಯಂತೆ ಕ್ರಮವಹಿಸಲಾಗುವುದು.
(ಆ)	ಕ್ರಿಯಾ ಒಪ್ಪಂದದ ಆರ್ಟಿಕಲ್ 4 ರಂತೆ ರಚಿಸಲಾಗಿರುವ ಅಧಿಕಾರದತ್ತ ಸಮಿತಿಯು ದಿನಾಂಕ:05/08/2008 ರಿಂದ ಇದುವರೆವಿಗೂ ಸಭೆ ಸೇರದಿರಲು ಕಾರಣಗಳೇನು;	
(ಇ)	ಬಿಎಂಐಸಿಪಿ ಯೋಜನೆಯ ಸೆಕ್ಷನ್–ಎ ಭಾಗದ ಅಭಿವೃದ್ಧಿಯನ್ನು ಮೆ; ನೈಸ್‌ಗೆ ಉಪ ಗುತ್ತಿಗೆ ನೀಡಲಾಗಿದ್ದು, ಕ್ರಿಯಾ ಒಪ್ಪಂದದಲ್ಲಿ ನಿಗಧಿಪಡಿಸಲಾದ ಕಾಲಮಿತಿ ಮುಗಿದಿದ್ದರೂ, ಯೋಜನೆಯ ಉಳಿದ ಭಾಗದ ಅಭಿವೃದ್ಧಿಯನ್ನು ಮುಖ್ಯ ಕರಾರುದಾರರಾದ ಮೆ: ನೈಸ್ ಸಂಸ್ಥೆ ನಿರ್ವಹಿಸದಿರುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	
(ಈ)	ಹಿಂದಿನ ಅಡ್ವೊಕೇಟ್ ಜನರಲ್‌ರವರು ಮೆ:ನೈಸ್ ಸಂಸ್ಥೆಯ ಅಕ್ರಮಗಳ ಸಂಬಂಧ ಭಾರತ ಸಂವಿಧಾನದ ಷೆಡ್ಯೂಲ್ VII List III Entru 42 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಶಾಸನ ರಚಿಸುವ ಬಗ್ಗೆ ಅಭಿಪ್ರಾಯ ನೀಡಿದ್ದರೂ, ಯಾವೂದೇ ಕ್ರಮ ವಹಿಸದಿರಲು ಕಾರಣಗಳೇನು;	ಅಡ್ವೊಕೇಟ್ ಜನರಲ್ ರವರು ನೀಡಿರುವ ಅಭಿಪ್ರಾಯದಲ್ಲಿನ ಮುಂದುವರೆದ ಭಾಗದಲ್ಲಿ "ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ನೀಡುವ ಅಂತಿಮ ಆದೇಶಗಳನ್ನು ನಿರೀಕ್ಷಿಸಿ, ತದನಂತರ ಕ್ರಮವಹಿಸುವುದು ಸೂಕ್ತವೆಂದು" ಸಹ ಅಭಿಪ್ರಾಯ ನೀಡಿರುತ್ತಾರೆ. ಸದರಿ ವಿಷಯಗಳನ್ನು ಸಚಿವ ಸಂಪುಟ ಉಪ ಸಮಿತಿ ಮುಂದೆ ಮಂಡಿಸಿ, ಸಮಿತಿಯ ನಿರ್ದೇಶನದಂತೆ ಕ್ರಮವಹಿಸಲಾಗುವುದು.

(ಉ)	ಮೆ:ನೈಸ್ ಸಂಸ್ಥೆಯು 2012 ರಿಂದ ಅನಧಿಕೃತವಾಗಿ Asphalt ರಸ್ತೆ ನಿರ್ಮಿಸಿ, ಕಾಂಕ್ರೀಟ್ ರಸ್ತೆ ದರದಲ್ಲಿ ಟೋಲ್ ಸಂಗ್ರಹಣೆ ಮಾಡುತ್ತಿದ್ದು, ಟೋಲ್ ಸಂಗ್ರಹಣೆ ಸಂಬಂಧ ನ್ಯಾಯಾಲಯದಲ್ಲಿ ಯಾವುದೇ ತಡೆಯಾಜ್ಞೆ ಇಲ್ಲದಿದ್ದರೂ, ನ್ಯಾಯಾಲಯದ ನೆಪವೊಡ್ಡಿ ಯಾವುದೇ ಕ್ರಮ ವಹಿಸದಿರಲು ಕಾರಣ ಏನು; ಅನಧಿಕೃತ ಟೋಲ್ ಬೂತ್‌ಗಳಿಗೆ ಫಾಸ್ಟ್‌ಟ್ಯಾಗ್ ಅಳವಡಿಸಲು ಅನುಮತಿ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದು ಸದನ ಸಮಿತಿ ವರದಿಯ ಉಲ್ಲಂಘನೆಯಾಗುವುದಿಲ್ಲವೇ?	ಮೆ:ನೈಸ್ ಸಂಸ್ಥೆಯು ಅನಧಿಕೃತವಾಗಿ Asphalt ರಸ್ತೆ ನಿರ್ಮಿಸಿ, ಕಾಂಕ್ರೀಟ್ ರಸ್ತೆ ದರದಲ್ಲಿ ಟೋಲ್ ಸಂಗ್ರಹಣೆ ಮಾಡುತ್ತಿರುವ ಬಗ್ಗೆ Default Notice ನ್ನು ದಿನಾಂಕ:05-02-2016 ರಂದು ಜಾರಿಮಾಡಲಾಗಿದೆ. ಈ Notice ಗೆ ವಿರುದ್ಧವಾಗಿ ಮೆ:ನೈಸ್ ಸಂಸ್ಥೆಯವರು ರೀಟ್ ಅರ್ಜಿ ಸಂಖ್ಯೆ: 12109/2016 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ ಹಾಗೂ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಟೋಲ್ ಬೂತ್‌ಗಳಿಗೆ ಫಾಸ್ಟ್‌ಟ್ಯಾಗ್ ಅಳವಡಿಸಲು ಇಲ್ಲಿಯವರೆಗೆ ಅನುಮತಿ ನೀಡಿರುವುದಿಲ್ಲ. ಮೆ:ನೈಸ್ ಸಂಸ್ಥೆಯು ಅನಧಿಕೃತವಾಗಿ Asphalt ರಸ್ತೆ ನಿರ್ಮಿಸಿರುವ ಕುರಿತು ಹಾಗೂ ಫಾಸ್ಟ್‌ಟ್ಯಾಗ್ ಅಳವಡಿಸುವ ಇನ್ನಿತ್ತರೆ ವಿಷಯಗಳ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ಮುಂದೆ ಮಂಡಿಸಿ, ಸಮಿತಿಯ ನಿರ್ದೇಶನದಂತೆ ಕ್ರಮವಹಿಸಲಾಗುವುದು.

ಸಂಖ್ಯೆ: ಲೋಇ 05 ಸಿ.ಆರ್.ಎಂ. 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು
(ಲೋಕೋಪಯೋಗಿ ಮತ್ತು ಸಮಾಜ
ಕಲ್ಯಾಣ ಇಲಾಖೆ)